ಉಪಾಧ್ಯಕ್ಷಣಿಯವರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ತಮಗೆ ಈಗಾಗಲೇ ಒಂದು ವಿಚಾರ ತಿಳಿಸಿದ್ದೆ. ಏನೆಂದರೆ, ನಿನ್ನೆಯಿಂದ ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿ ಒಂದು ಇಂಟರ್‌ವ್ಯೂ ನಡೆಯುತ್ತಿದೆ. ಫಿಷ್‌ಬಕ್ ಎಂಬ ಮನುಷ್ಯ ಹೊರದೇಶದಿಂದ ಬಂದು ಹೊರದೇಶಕ್ಕೆ ವಿದ್ಯಾರ್ಥಿಗಳನ್ನು ಒಳ್ಳೊಳ್ಳೆಯ ಎಜುಕೇಷನ್ ಕೊಡಿಸುತ್ತೇನೆ ಎಂದು ಹೇಳುತ್ತಾ.....

ಉಪಾಧ್ಯಕ್ಷಣಿಯವರು.—ಶಿವರಾಮೇಗೌಡರೇ, ದಯವಿಟ್ಟು ಒಂದು ನಿಮಿಷ, ಈಗ ಪೇಪರ್ಸ್‌ಲೇ ಮಾಡುವುದು ಇದೆ. ಆಮೇಲೆ ಹೇಳಿ.

ಶ್ರೀ ಎನ್. ಜಿ. ನಾಯಕ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ ನನ್ನ ಯಾವ ಪ್ರಶ್ನೆಗಳಿಗೂ ಯಾವುದಕ್ಕೂ ಉತ್ತರ ಬಂದಿಲ್ಲ.

ಉಪಾಧ್ಯಕ್ಷಣಿಯವರು.—ತಮಗೆ ಉತ್ತರಗಳನ್ನು ಒದಗಿಸಿಕೊಡಲಾಗುತ್ತದೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ. ರಾಜಶೇಖರ ಮೂರ್ತಿ (ಪೂರ್ಣಕಾಲ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೫೬ನೆ ಇಸವಿಯ ಕೇಂದ್ರ ಮಾರಾಟ ತೆರಿಗೆ ಶಾಸನದ ಅನೇಕ ಕಲಮಿನ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ಗೋಡಂಬಿಯನ್ನು ಮಾರಾಟ ಮಾಡಲು ಯಾವುದೇ ವ್ಯಾಪಾರಿಗೆ ತೆರಿಗೆ ಇಳಿತಾಯ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೬೦ನೇ ಜೂನ್ ೩೦ನೇ ದಿನಾಂಕದಂದು ಹೊರಡಿಸಲಾದ ಎಫ್‌ಡಿ ೧೪೭ ಸಿಎಸ್‌ಎಲ್ ೬೦ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು.—ಕಾಗದ ಪತ್ರವನ್ನು ಸಭೆಯ ಮುಂದಿಡಲಾಯಿತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳ ಪರವಾಗಿ ಮೈಸೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಹಾಗೂ ನೇಲಂಬಿಂದ ಕೊಳ್ಳೇಗಾಲಕ್ಕೆ ಅಣ್ಣಾ ಸಾರಿಗೆ ಸಂಸ್ಥೆಯವರು ಓಡಿಸುತ್ತಿರುವ ಐದು ಬಸ್‌ಗಳಿಗೆ ತೆರಿಗೆ ವಿನಾಯಿತಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ೧೯೬೦ನೇ ಜನವರಿ ೨೩ನೇ ದಿನಾಂಕದಂದು ಹೊರಡಿಸಲಾದ ಸಂಖ್ಯೆ ಎಫ್.ಡಿ. ೪೪೩, ಬಿ ಎಂಟಿ ೬೯ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು. ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

೧೦–೩೦ ಎ.ಎಂ.

ಉಪಾಧ್ಯಕ್ಷಣಿಯವರು.—ಈಗ.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಣೀಯವರೇ ನಾನು ಸುಮಾರು ೧೦–೧೨ ಗಮನ ಸೆಳೆಯುವ ಸೂಚನೆಗಳನ್ನು ಕೊಟ್ಟಿದ್ದೇನೆ. ಆದರೆ ಇದುವರೆವಿಗೆ ಒಂದಕ್ಕೂ ಸರ್ಕಾರದಿಂದ ಉತ್ತರ ಬಂದಿಲ್ಲ. ದಯವಿಟ್ಟು ತಾವು ಉತ್ತರ ತರಿಸುವ ವ್ಯವಸ್ಥೆ ಮಾಡಬೇಕು. ಮತ್ತೆ ಯಾವ ಮಂತ್ರಿಗಳ ಖಾತೆ ಇರುತ್ತದೆಯೋ ಅವರೇ ಉತ್ತರಕ್ಕೆ ಸಹಿ ಹಾಕಬೇಕೆಂದು ಇದೆ. ನಮಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲರು ಬದಲಾವಣೆಯಾಗಿದ್ದಾರೆಯೇ? ಯಾವಾಗ ಬದಲಾವಣೆ ಆದರು? ನನಗೆ ಕೊಟ್ಟಿರತಕ್ಕಂಥ ಎರಡು ಪ್ರಶ್ನೆಗಳ ಉತ್ತರಕ್ಕೆ ಮುಖ್ಯ ಮಂತ್ರಿಗಳ ಹೆಸರು ಇಲ್ಲ ಅವರ ಸಹಿ ಇಲ್ಲ. ಇಲ್ಲಿ ಮುಖ್ಯಮಂತ್ರಿ ಶ್ರೀ ನಾಗರಾಜಯ್ಯ ಎಂದಿದೆ. ಇನ್ನೊಂದರಲ್ಲಿ ಮುಖ್ಯಮಂತ್ರಿ ಶ್ರೀಮತಿ ಸೀತ ಎಂದು ಇದೆ. ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲರೇ ಅಥವಾ ಶ್ರೀಮತಿ ಸೀತ ಮತ್ತು ನಾಗರಾಜಯ್ಯನವರೇ ಎಂಬುದನ್ನು ದಯವಿಟ್ಟು ಈ ಸಭೆಯಲ್ಲಿ ತಾವು ಹೇಳಬೇಕು. ಈ ರಾಜ್ಯದಲ್ಲಿ ಮುಖ್ಯ ಮಂತ್ರಿಗಳ ಬದಲಾವಣೆಯನ್ನು ತಮ್ಮ ಇಚ್ಛೆ ಬಂದಂತೆ ಬದಲಾವಣೆ ಮಾಡುವುದಾದರೆ ಇದು ಪ್ರಜಾಪ್ರಭುತ್ವಕ್ಕೆ ಅಗೌರವ ತೋರಿಸಿದಂತೆ ಆಗುತ್ತದೆ. ಇದು ಪ್ರಜಾಪ್ರಭುತ್ವದ ಲಕ್ಷಣ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ವೀರೇಂದ್ರಪಾಟೀಲರು ಎಂದು ನಾವು ತಿಳಿದುಕೊಂಡಿದ್ದೇವೆ. ಅವರು ಬದಲಾವಣೆ

ಯಾಗಿದ್ದರೆ ದಯಮಾಡಿ ತಿಳಿಸಿ. ತಿಂಗಳಿಗೆ ಒಬ್ಬರಂತೆ ಬದಲಾವಣೆ ಮಾಡುವುದಾದರೆ ಅದನ್ನು ನಮಗೆ ತಿಳಿಸಬೇಕು. ಮಾನ್ಯ ಅಧ್ಯಕ್ಷಣೀಯರೇ, ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ ತಾವೇ ನೋಡಿ. ಇನ್ನು ಮುಂದೆ ಈ ರೀತಿಯ ವಿಚಿತ್ರ ಪ್ರಸಂಗ ಆಗಬಾರದು. ಇದು ಸರಿಯಲ್ಲ.

ಉಪಾಧ್ಯಕ್ಷಣಿಯವರು.—ಅದನ್ನು ಕಳುಹಿಸಿಕೊಡಿ. ನಾನು ನೋಡುತ್ತೇನೆ. ಈಗ ಸಭೆಯ ಮುಂದೆ ಆರ್ಜಿಗಳನ್ನು ಒಪ್ಪಿಸುವುದು.

ಆರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ. ಮಾನ್ಯ ಅಧ್ಯಕ್ಷಣೀಯರೇ, (ಅ) ಕುಂದಾಪುರ ಆಳಿವೆ ದರ ದಲ್ಲಿ ಮಿನುಗಾರಿಕೆ ಬಂದರು ಒದಗಿಸುವ ಬಗ್ಗೆ, (ಆ) ಕುಂದಾಪುರ ಆಸ್ಪತ್ರೆಗೆ ಆಂಬುಲೆನ್ಸ್ ಒದಗಿಸುವ ಬಗ್ಗೆ (ಇ) ಕುಂದಾಪುರದಲ್ಲಿ ಆಗ್ನಿಶಾಮಕ ದಳವನ್ನು ಒದಗಿಸುವ ಬಗ್ಗೆ (ಈ) ಗಂಗೊಳ್ಳಿ ಆಳಿವೆ ಬಾಗಿಲಿನಲ್ಲಿ ಹೂಳೆತ್ತಿಸಿ ಮಿನುಗಾರಿಕೆಗೆ ಅನುವು ಮಾಡಿಕೊಡುವ ಬಗ್ಗೆ. ಈ ಆರ್ಜಿಗಳನ್ನು ನಾನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷಣಿಯವರು.—ಆರ್ಜಿಗಳನ್ನು ಸಭೆಗೆ ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

ಗಂಧದ ಕಳ್ಳ ವ್ಯಾಪಾರವನ್ನು ನಿಲ್ಲಿಸುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷಣೀಯರೇ ಬೆಳ್ತಂಗಡಿ ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ಗಂಧದ ಕಳ್ಳ ವ್ಯಾಪಾರವು ಹೆಗಲು ರಾತ್ರಿ ನಿರಂತರ ನಡೆಯುತ್ತಿದೆ. ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಕರ್ನಾಟಕದಿಂದ ಕೇರಳಕ್ಕೆ ಸಾಗಿಸುತ್ತಿರುವ ಶ್ರೀಗಂಧದ ವ್ಯಾಪಾರ ನಿಲ್ಲಿಸುವಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಬೆಳ್ತಂಗಡಿಗೆ ಚಿಕ್ಕಮಗಳೂರು ಕಡೆಯಿಂದ ಚಾರ್ಮಾಡಿ ಗೇಟ್ ಮುಖಾಂತರ ಸರ್ಕಾರಿ ಬಸ್ಸುಗಳಲ್ಲಿ ಶ್ರೀಗಂಧವನ್ನು ಕಳ್ಳಸಾಗಾಣಿ ಮಾಡುವ ಪ್ರಯತ್ನ ನಡೆದಿದ್ದು ೧೯೮೯-೯೦ರಲ್ಲಿ ಇಂತಹ ೧೦ ಪ್ರಕರಣಗಳನ್ನು ಪತ್ತೆ ಮಾಡಿ ೧೧,೫೯೦ ರೂಪಾಯಿ ಪರಿಮಾಣದ ೧೧೮.೧೦೦ ಕೆ. ಜಿ ಶ್ರೀಗಂಧ ವನ್ನು ವಶಪಡಿಸಿಕೊಳ್ಳಲಾಗಿದೆ.

ಕರ್ನಾಟಕದಿಂದ ಕೇರಳಕ್ಕೆ ಗಂಧವನ್ನು ಕಳ್ಳಸಾಗಣೆ ಮಾಡುವುದನ್ನು ತಡೆಯಲು ಗಡಿ ಪ್ರದೇಶ ದಲ್ಲಿ ಅರಣ್ಯ ತನಿಖಾ ಠಾಣೆಗಳನ್ನು ನಿರ್ಮಿಸಿ, ಅವುಗಳ ಮುಖಾಂತರ ಹೋಗುವ ಪ್ರತಿಯೊಂದು ವಾಹನವನ್ನು ಪರಿಶೀಲಿಸಿ, ಗಂಧವು ಕಳ್ಳ ಸಾಗಣೆಯಾಗದಂತೆ ತಡೆಯಲಾಗುತ್ತಿದೆ.

ಬೆಳ್ತಂಗಡಿ ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ಶ್ರೀಗಂಧದ ಕಳ್ಳ ಸಾಗಾಣಿಕೆ ನಡೆಯುತ್ತಿದ್ದುದ್ದಿ ಇದನ್ನು ತಡೆಗಟ್ಟಲು ಅರಣ್ಯ ಸಿಬ್ಬಂದಿಯವರೂ ಮತ್ತು ಪೋಲೀಸ್ ಸಿಬ್ಬಂದಿಯವರೂ ನಿರಂತರ ವಾಗಿ ಶ್ರಮಿಸುತ್ತ ಇದನ್ನು ತಡೆಗಟ್ಟುತ್ತಿದ್ದಾರೆ. ಅರಣ್ಯ ಸಂಚಾರಿ ದಳಗಳನ್ನು ನೇಮಿಸಿ ಈ ದಳ ಗಳಿಗೆ ವೈರ್‌ಲೆಸ್ ಉಪಕರಣಗಳನ್ನು ಜೋಡಿಸಿರುವ ವಾಹನಗಳನ್ನು ಒದಗಿಸಲಾಗಿದೆ. ಕರ್ನಾಟ ಕೇರಳ ಗಡಿ ಪ್ರದೇಶಗಳಲ್ಲಿ ರಕ್ಷಣಾ ಸಿಬ್ಬಂದಿಯನ್ನು ಹೆಚ್ಚಿಸಿ ಇವರಿಗೆ ವಾಕಿ-ಟಾಕಿ ಉಪಕರಣಗಳನ್ನು ಒದಗಿಸಲಾಗಿದೆ.

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷಣೀಯರೇ, ಮಾನ್ಯ ಮಂತ್ರಿಗಳು ಓದಿದ ಉತ್ತರದ ಪ್ರಕಾರ ಹೀಗೆಲ್ಲಾ ಮಾಡಿರುವುದು ಅಂದರೆ, ಮೂಡಿಗೆರೆ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ಶ್ರೀಗಂಧದ ಕಳ್ಳಸಾಗಾಣಿಕೆ ನಿಂತೇ ಹೋಗಿದೆ ಎನ್ನುವ ರೀತಿಯಲ್ಲಿ ಈ ಉತ್ತರ ಇದೆ.